ಅಲ್ಲಿಗೆ ಹಾಕಬೇಡಿ ಎಂದರೆ ಹೇಗೆ? ಇಲ್ಲದಿದ್ದರೆ ಮನೋಹರ ಜೋಷಿಯವರು ತುಂಬಿದಂಗೆ ತುಂಬಿದರೆ ಹೇಗೆ? ಆಗ ಅವೆಲ್ಲಾ ಏನಾಗುತ್ತದೆ? ಆಗ ಎಂಥ ಸಿಲಬಸ್ ಬರುತ್ತದೆ?

ಶ್ರೀ ಬಿ.ವಿ. ಶ್ರೀರಾಮರೆಡ್ಡಿ:– ನಾನು ಹೇಳಿದ್ದು ಶಾಸಕರನ್ನು ಹಾಕಬೇಡಿ ಎಂದು ಹೇಳಿದೆ. ಅರ್ಥಶಾಸ್ತ್ರಜ್ಞರನ್ನು ಹಾಕಬೇಡಿ ಎಂದು ನಾನು ಹೇಳಲಿಲ್ಲ. ನೀವು ಕನ್ ಫ್ಯೂಸ್ ಮಾಡಬೇಡಿ. ಸಿಂಡಿಕೇಟ್ ಗೆ ನೀವು ಬೇಕಾದರೆ ನಾಮಕರಣವನ್ನು ಮಾಡಿ. ನಾವು ಬೇಡ ಎಂದು ಹೇಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಮ್ಮಲ್ಲಿ ರೈತ ಮುಖಂಡರು ಇದ್ದಾರೆ. ರೈತರು ಇದ್ದಾರೆ. ಆದರೆ ನೇಗಿಲನ್ನು ಒಂದು ದಿವಸವೂ ಯಾರೂ ಕೈಯಲ್ಲಿ ಹಿಡಿದಿಲ್ಲ. ಕುರುಪಿ ಹಿಡಿದಿಲ್ಲ. ಗುದ್ದಲಿ ಹಿಡಿದಿಲ್ಲ. ಸಲಿಕೆ ಹಿಡಿದಿಲ್ಲ. ಆದರೂ ಕೂಡ ನಾವು ರೈತರೇ. ಹೌದಲ್ಲ ಅರೆ, ನಾವು ನೋಡಿದ್ದೇವಲ್ಲ. ಇನ್ನೊಬ್ಬರಿಂದ ಮಾಡಿಸುತ್ತಾರೆಯೇ ಹೊರತಾಗಿ ಅವರು ಮಾಡುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ನಾನು ಅದರ ಬಗ್ಗೆ ಚರ್ಚೆ, ವಾದಕ್ಕೆ ನಿಮ್ಮ ಹತ್ತಿರಕ್ಕೆ ತರುತ್ತಿಲ್ಲ. ಮತ್ತೆ ಇನ್ನೊಂದು ವಿಚಾರ ಹೇಳಿಬಿಡುತ್ತೇನೆ. ಅನಂತರ ತಾವು ಉತ್ತರ ಕೊಟ್ಟುಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಹೇಳುವವರಿಗೆ ಆರಾಣೆ, ಮಾಡುವವರಿಗೆ ಮೂರಾಣೆ ಏಕೆ ಕೂಲಿಯನ್ನು ಕೊಡುವುದು ಹೇಳಿ. ಹೇಳುವವನು ಮಾಡುವವನಿ ಗಿಂತ ಹತ್ತು ಪಟ್ಟು ಬುದ್ಧಿವಂತನಿರುತ್ತಾನೆ. ನೀವು ಮಾಡುವ ಮಿಸ್ಟೇಕ್ ಎಲ್ಲಾ ತಿದ್ದುತ್ತಾನೆ ಎಂದು ಹೇಳುವವನೇ ಬುದ್ಧಿವಂತನಲ್ಲವಾ? ಅದಕ್ಕೆ ಅವನಿಗೆ ಆರಾಣಿ ಕೂಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮತ್ತೆ ಇನ್ನೊಂದು ವಿಚಾರ, ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ಏಪ್ರಿಲ್ ವರೆಗೂ ನೀರು ಬಿಡುವುದು ಎನ್ನುವ ಕಾರಣಕ್ಕೋಸ್ಕರ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಏಪ್ರಿಲ್ ನಂತರ ನೀರನ್ನು ಬಿಡುವುದಿಲ್ಲ ಎಂದು. ಆ ನೀರನ್ನು ಬಿಡದೆ ಹೋದರೆ 553 ಕೋಟಿ ರೂಪಾಯಿ ಬೆಳೆ ನಷ್ಟವಾಗುತ್ತದೆ. ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ಅದರಲ್ಲಿ ಶೇಂಗಾವನ್ನು 40 ಸಾವಿರ ಎಕರೆಯಲ್ಲಿ ಬೆಳೆದಿದ್ದಾರೆ. ಅದು 20 ಕೋಟಿ ರೂಪಾಯಿ ಬೆಲೆಯಾಗುತ್ತೆ. ಹತ್ತಿಯನ್ನು ಒಂದು ಲಕ್ಷ ಎಕರೆಯಲ್ಲಿ ಬೆಳೆದಿದ್ದಾರೆ. ಅದು ನೂರು ಕೋಟಿ ರೂಪಾಯಿಯಾಗುತ್ತೆ. ಮೆಣಸಿನಕಾಯಿ 50 ಸಾವಿರ ಒಟ್ಟು 553 ಕೋಟಿ ನಷ್ಟವಾಗುತ್ತದೆ. ಆದರೆ ದಯವಿಟ್ಟು ನಾನು ಸರ್ಕಾರಕ್ಕೆ ತಮ್ಮ ಮುಖಾಂತರ ಹೇಳುತ್ತಿದ್ದೇನೆ, ಏಪ್ರಿಲ್ ಕೊನೆಯವರೆಗೂ ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ನೀರನ್ನು ಬಿಡಬೇಕು. ಅಲ್ಲಿನ ರೈತರನ್ನು ರಕ್ಷಣೆ ಮಾಡಬೇಕು. ಇಲ್ಲದಿದ್ದರೆ ಬೆಳೆ ನಾಶವಾಗುತ್ತದೆ. ಇಲ್ಲದಿದ್ದರೆ 550 ಕೋಟಿ ರೂಪಾಯಿಗಳು ನಷ್ಟವಾಗುತ್ತದೆ ಎನ್ನತಕ್ಕಂಥದ್ದನ್ನು ತಮ್ಮ ಮುಖಾಂತರ ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ(ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):– ಮಾನ್ಯ ಉಪಾಧ್ಯಕ್ಷರೇ, ತಾವು ಕೇಳಿದ್ದೀರಿ, ಇದು ನಿಜ. ಹಾಕಿಕೊಂಡಿರಬಹುದು. ಆದರೆ ನೋಟಿಫೈಡ್ ಏರಿಯಾ ಇದ್ದರೆ ಆ ನೋಟೀಫೈಡ್ ಏರಿಯಾ ಪ್ರಕಾರ ನಾವು ನೀರನ್ನು ಒದಗಿಸಬಹುದು. ಆದರೆ ಇಲ್ಲೀಗಲಿ ಅವರು ಹಾಕಿಕೊಂಡು ನೀವು ನೀರನ್ನು ಕೊಡಿ ಎಂದರೆ ಕೆಳಗಡೆ ಜನರಿಗೆ ಕುಡಿಯುವುದಕ್ಕೆ ನೀರನ್ನೂ ಕೊಡಬೇಕು, ಆಮೇಲೆ ನಾವು ಬೇಸಿಗೆಯಲ್ಲಿ ಕಾಲುವೆಗಳನ್ನು ರಿಪೇರಿಯನ್ನು ಮಾಡಬೇಕು. ಇವತ್ತು ಹೇಗೆ ಸಾಧ್ಯ? ಬರೀ ಮೇ ಒಂದು ತಿಂಗಳಿನಲ್ಲಿ ರಿಪೇರಿ ಮಾಡುವುದಕ್ಕೆ ಸಾಧ್ಯ, ಕುಡಿಯುವ ನೀರನ್ನು ಕೊಡುವುದಕ್ಕೆ ಸಾಧ್ಯ, ಇದೆಲ್ಲಾ ಕೂಡ ಯೋಚನೆ ಮಾಡಬೇಕು. ಈ ನಿರ್ಧಾರವನ್ನು ನಾನೇನು ತೆಗೆದುಕೊಳ್ಳುವುದಿಲ್ಲ. ಅವರು ಇರಿಗೇಷನ್ ಕನ್‌ಸಲ್‌ಟೀವ್ ಕಮಿಟಿಯಲ್ಲೇ ಅವರದೇ ಒಂದು ಕಮಿಟಿ ಇದೆ. ಯಾವಾಗ ನೀರನ್ನು ಬಿಡಬೇಕು? ಎಷ್ಟು ದಿವಸ ಬಿಡಬೇಕು? ಎಷ್ಟು ನೀರನ್ನು ಬಿಡಬೇಕು ಎಷ್ಟು ಕ್ವಾಂಟಿಟಿ ಬಿಡಬೇಕು ಎನ್ನತಕ್ಕಂಥ ನಿರ್ಧಾರವನ್ನು ಅವರೇ ಮಾಡುತ್ತಾರೆ. ಅವರು ನಿರ್ಧಾರ ಮಾಡಿ ಮೊದಲು ಏನು ಹೇಳಿದರು, 29ನೇ ಮಾರ್ಚ್‌ವರೆಗೆ ಬಿಟ್ಟರೆ ಸಾಕು ಎಂದರು. ಪುನಃ ನಿರ್ಣಯ ಬದಲಾಯಿಸಿ ಏನು ಹೇಳಿದರು, 5ನೆ ಏಪ್ರಿಲ್‌ವರೆಗೆ ಬಿಟ್ಟರೆ ಸಾಕು ಎಂದು. ನಾವು ಈಗ 5ನೇ ಏಪ್ರಿಲ್‌ವರೆಗೂ ಬಿಡುವುದಕ್ಕೆ ರೆಡಿ ಇದ್ದೇವೆ. ಈಗ ಪುನಃ ಅವರೇನು ಹೇಳುತ್ತಿದ್ದಾರೆ ಎಂದರೆ ಏಪ್ರಿಲ್ ಎಂಡ್ವರೆಗೆ ಬಿಡಿ ಎಂದು. ಅಂದರೆ ಇಡೀ ವರ್ಷ ಇದನ್ನೇ ನೀವು ಮಾಡಿಕೊಳ್ಳುತ್ತಾ ಹೋದರೆ ರಿಪೇರಿ ಮಾಡುವುದು ಯಾವಾಗ? ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು ಯಾವಾಗ? ಈಗ ಅನೇಕ ಹಳ್ಳಿಗಳಿಗೆ ಕುಡಿಯುವ ನೀರೇ ಇಲ್ಲ. ಅದೂ ಒಂದು ತಾಪತ್ರಯ ಇದೆ. ಎರಡನೆಯದಾಗಿ, ಅನೇಕ ಕಡೆ ಬ್ರಿಡ್ಜ್ ಆಗತಕ್ಕಂಥ ಕಡೆ ರಿಪೇರಿ ಮಾಡುವುದೇ ಬೇಸಿಗೆಯಲ್ಲಿ. ಅದೂ ಕೂಡ ಇದೆ ಅದಕ್ಕೆ ಈಗ ಅವರೇನು ನಮಗೆ ಮೊದಲು ಪ್ರೊಸೀಡಿಂಗ್ಸ್ ಮಾಡಿ ಕಳುಹಿಸಿದ್ದರು, ಅದರ ಪ್ರಕಾರವೇ ನಾವು ಅವರಿಗೆ ಸಹಾಯವನ್ನು ಮಾಡುತ್ತಿದ್ದೇವೆ. ಅದನ್ನು ಬಿಟ್ಟು ಕಂಟಿನ್ಯೂ ಮಾಡಿಕೊಳ್ಳುತ್ತಲೇ ಹೋಗಿ ಎಂದರೆ ಇದೇನಾದರೂ ನಾಳೆ ಅನೇಕ ಹಳ್ಳಿಗಳಿಗೆ ಕುಡಿಯುವ ನೀರಿನಿಂದ ವಂಚಿತ ರಾಗುತ್ತಾರೆ ಮತ್ತು ಬೇರೆ ಬೇರೆಯವರಿಂದಲೂ ಕೂಡ ತೊಂದರೆಯಾಗುತ್ತದೆ. ಆಲ್ಟಿಮೇಟ್‌ಲಿ ಟೇಲೆಂಡರ್ಸ್‌ಗೆ ನೀರು ಹೋಗಬೇಕು, ರಿಪೇರಿ ಮಾಡಲಿಕ್ಕೂ ನಾವು ಕೊಡಬೇಕು, ಅವರಿಗೂ ಅನ್ಯಾಯವಾಗುತ್ತದೆ. ಅದಕ್ಕಾಗಿ ಕೆಲವೇ ಜನರಿಗೆ ಲಾಭ ಮಾಡುವುದಕ್ಕೋಸ್ಕರ ಇಡೀ ಸಮುದಾಯಕ್ಕೆ ನಾವು ತೊಂದರೆ ಮಾಡ ತಕ್ಕದ್ದು ಸರಿ ಇಲ್ಲ. ದಯವಿಟ್ಟು ನಾವು ಅವರಿಗೂ ಕೂಡ ಹೇಳಿಕೊಂಡಿದ್ದೇವೆ. ಆದಷ್ಟು 5ನೇ ಏಪ್ರಿಲ್‌ವರೆಗೂ ನಾವು ನೀರನ್ನು ಬಿಡುತ್ತೇವೆ. ಅದೇ ಕೊನೆಯದು ಎಂದು ಕೂಡ ತಿಳಿಸಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಉಪಾಧ್ಯಕ್ಷರೇ, ನೀವು ಹೇಳುವುದು ಸತ್ಯ ನಿಜ. ಆದರೆ ಬೆಳೆ 500 ಕೋಟಿ ರೂಪಾಯಿಯಷ್ಟು ನಾಶವಾಗುತ್ತೆ. ನೀವು ಮೊದಲು ಅವರು ಇಲ್ಲೀಗಲ್ ಆಗಿ ಹಾಕಿಕೊಂಡಿದ್ದಾರೆ ಅದನ್ನು ಹಾಕದೇ ತಡೆಯತಕ್ಕ ಕ್ರಮವನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡಬೇಕಾಗಿತ್ತು. ಹಾಕಿಬಿಟ್ಟ ಮೇಲೆ ಅದು ಇಲ್ಲೀಗಲ್ ಎಂದು ಹೇಳಿದರೆ ಬೆಳೆ ನಾಶವಾಗುತ್ತದೆ. ಇದು ಬರೀ ನಾಲ್ಕೈದು ಜನರಿಗಲ್ಲ ಸಾವಿರಾರು ಎಕರೆಯಲ್ಲಿ ಬೆಳೆದಿರತಕ್ಕಂಥದ್ದು ಇದು. ನಾಲ್ಕೈದು ಜನಕ್ಕೋ ಐದಾರು ಜನಕ್ಕೋ ಆದರೆ ಇದು ತೊಂದರೆ ಅಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:– ನೂರಾರು ಎಕರೆಯಲ್ಲಿ ಬೆಳೆದಿರತಕ್ಕಂಥ ಬೆಳೆ ಇವತ್ತು ನಾಶವಾಗುತ್ತಿದೆಯಲ್ಲ ದಯವಿಟ್ಟು ನಾನು ಸರ್ಕಾರವನ್ನು ವಿನಂತಿ ಮಾಡುವುದೇನೆಂದರೆ, ಈ ವರ್ಷದ ಏಪ್ರಿಲ್ ಕೊನೆಯವರೆಗೂ ಬಿಡಿ. ಮುಂದಿನ ವರ್ಷ ಕಾನೂನುಬದ್ಧವಾಗಿ... ಯಾರು ಅವರು ಕಾನೂನು ವಿರುದ್ಧವಾಗಿ ಬೆಳೆ ಇಡುತ್ತಾರೆ, illegal ಆಗಿ ಯಾರು crop ಬೆಳೆಯುತ್ತಾರೆ ಅದನ್ನು allow ಮಾಡಬೇಡಿ ಅಷ್ಟಾದರೂ ಮಾಡಬಹುದಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಾರಿಗೆ ಸಚಿವರು): ಇದು ನಮ್ಮ ತೀರ್ಮಾನ ಅಲ್ಲಾರಿ. ನೋಡಿ, 10.3.05ರಂದು ನೀರಾವರಿ ಸಲಹಾ ಸಮಿತಿ ಸಭೆಯನ್ನು ಜರುಗಿಸಿ ನಾರಾಯಣಪುರ ಮತ್ತು ಆಲಮಟ್ಟಿ ಜಲಾಶಯಗಳಲ್ಲಿರುವ ನೀರಿನ ಲಭ್ಯತೆಯನ್ನು ಪರಿಗಣಿಸಿ ನೀರನ್ನು ದಿನಾಂಕ 29.03.05ರವರೆಗೆ ಮುಂದುವರೆಸಲು ತೀರ್ಮಾನ ಕೈಗೊಳ್ಳಲಾಯಿತು ಹೌದಾ? ಅದಾದಮೇಲೂ ಕೂಡ ಪುನಃ ಒತ್ತಡ ಬಂದ ಮೇಲೆ ಅವರೇ ತೆಗೆದುಕೊಂಡಂಥ ತೀರ್ಮಾನ. ಆದರೂ ಕೂಡ ನಾವೇನು ಮಾಡಿದ್ದೇವೆ, ಪುನರ್ ಪರಿಶೀಲನೆ ಮಾಡಿ ಎಂದಾಗ ಅದರ ಬಗ್ಗೆ ಕೋರಿಕೆಗಳನ್ನು ಸ್ವಂದಿಸಿ ನೀರನ್ನು ದಿನಾಂಕ 5.04.05ರವರೆಗೆ ಮುಂದುವರೆಸುವ ನಿರ್ಧಾರ ಕೈಗೊಳ್ಳಲಾಗಿದೆ. ನೀರಾವರಿಗಾಗಿ 4.13 ಟಿಎಂಸಿ ನೀರನ್ನು ದಿ.5.04.05ರವರೆಗೆ ಬಿಡುವಂತೆ ವ್ಯವಸ್ಥೆ ಮಾಡಲಾಗಿದೆ

ಉಪಾಧ್ಯಕ್ಷರು: ನರೇಂದ್ರಬಾಬುರವರೆ ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಸಾರ್, ಇನ್ನೊಂದಕ್ಕೆ ಉತ್ತರ ಕೊಡಲಿಲ್ಲ. ನನ್ನದು ಅಕಾಡೆಮಿಕ್, ದಯವಿಟ್ಟು ಅದಕ್ಕೆ ಉತ್ತರ ಕೊಡಬೇಕು. ಕಾನೂನು ಮಂತ್ರಿಗಳಿದ್ದಾರೆ. ಯುನಿವರ್ಸಿಟಿ ಅಕಾಡೆಮೀಸ್ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ ಅಕಾಡೆಮಿ ನೇಮಕಗಳ ಬಗ್ಗೆ...

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):– ಶ್ರೀರಾಮರೆಡ್ಡಿಯವರು ಕೇಳಿದ ಪ್ರಶ್ನೆಗೆ ನಾನು ಉತ್ತರ ಹೇಳುತ್ತಿದ್ದೇನೆ. ಯೂನಿವರ್ಸಿಟಿ ಅಕಾಡೆಮಿಕ್ ಕೌನ್ಸಿಲ್ ಗೆ, ಇತರೆ ಬಡೀಸ್‌ಗೆ ನಾಮಿನೇಟ್ ಮಾಡಬೇಕಾದರೆ ನಮ್ಮ ಆಕ್ಟ್ ನಲ್ಲಿ ಯಾವ ತರಹವಿದೆ, ಅದೇ ತರಹ ನಾವು ಮಾಡುತ್ತೇವೆ. ಇನ್ನೂ ಮಾಡೇ ಇಲ್ಲ. ಇನ್ನೂ ಯಾವುದೂ ಮಾಡಿಲ್ಲ. ಯಾವ ಯೂನಿವರ್ಸಿಟಿ ಬಾಡೀಸ್‌ಗೂ ಮಾಡಿಲ್ಲ. ಮಾಡಬೇಕಾದರೆ, ಯೂನಿವರ್ಸಿಟಿ ಆಕ್ಟ್ ಏನಿದೆಯೋ, ಅದರ ಪ್ರಕಾರವೇ ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಅಕಾಡೆಮಿಕ್ ಕೌನ್ಸಿಲ್‌ಗೆ ಲೆಜಿಸ್ಲೇಟರ್ಸ್ ಅನ್ನು ಹಾಕಿ ನಾವು ಅಲ್ಲಿ ಮೀಟಿಂಗ್ ಗೆ ಹೋಗಲಿಕ್ಕೂ ಇಲ್ಲ, ಇದೇ ಸಂದರ್ಭದಲ್ಲಿ ಅದು ಮೀಟಿಂಗ್ ಆಗುತ್ತದೆ ಒಂದು ವೇಳೆ ಕಾನೂನು ಅ ತರಹವಿದ್ದರೆ ಸ್ವಲ್ಪ ಬದಲಾವಣೆಯನ್ನು ಮಾಡಿದರೆ, ತಿದ್ದುಪಡಿ ತರಬೇಕಾಗುತ್ತದೆ ಅಕಾಡೆಮಿಕ್ ಕೌನ್ಸಿಲಿಂಗ್ ಬೇಡ.

ಶ್ರೀ. ಜಿ.ವಿ. ಶ್ರೀರಾಮರೆಡ್ಡಿ:– ಅಕಾಡೆಮಿಕ್ ಕೌನ್ಸಿಲ್‌ಗೆ ನಿಮ್ಮ ಆಕ್ಟ್ ಪ್ರಕಾರವೇ ನೇಮಕ ಮಾಡಬಾರದೆಂದು ನೀವು ಕೌನ್ಸಿಲ್‌ನಲ್ಲೇ ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ಆಕ್ಟ್‌ನಲ್ಲಿರುವ ಪ್ರಕಾರ ಮಾಡಿಲ್ಲ.

ಶ್ರೀ ಡಿ. ಮಂಜುನಾಥ್: ಮಾಡೇ ಇಲ್ಲವೆಂದರೆ, ಮಾಡಿದ್ದೇವೆ. ನಾವಿನ್ನೂ ಯಾವುದೂ ಮಾಡೇ ಇಲ್ಲ ಮಾಡಬೇಕಾದರೆ ಆಕ್ಟ್ ಪ್ರಕಾರ ಮಾಡುತ್ತೇವೆ.

ಶ್ರೀ ಹೆಚ್. ಡಿ. ಬಸವರಾಜು:– ತಾವು ತಿದ್ದುಪಡಿ ತಂದು....

ಉಪಾಧ್ಯಕ್ಷರು:– ಬಸವರಾಜ್ ತಾವು ಕುಳಿತುಕೊಳ್ಳಿ, ಇದು ನೀರಾವರಿಯದು

ಶ್ರೀ ಹೆಚ್.ಡಿ. ಬಸವರಾಜ್:– ತಾವು ತಿದ್ದುಪಡಿ ತೆಗೆದುಕೊಂಡು ಬಂದು ಅಕಾಡೆಮಿಕ್ ಕೌನ್ಸಿಲ್ ಮೆಂಬರ್ಸ್ ಅನ್ನು ಯಾರನ್ನು ಮಾಡಿದ್ದೀರಿ, ಅವರನ್ನೆಲ್ಲ ಸೆನೆಟ್ ಮೆಂಬರ್ ಮಾಡಿ ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ನಾವು ಕುಳಿತುಕೊಳ್ಳುವ ಬದಲು ಸೆನೆಟ್‌ನಲ್ಲಾದರೂ ಹೋಗಿ ಕುಳಿತರೆ....

ಶ್ರೀ ಡಿ. ಮಂಜುನಾಥ್:– ಆಯಿತು. ಅದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದರು ಮಾಧುಸ್ವಾಮಿ ಹೋದ ಸಾರಿ ಕೇಳಿದಾಗಲೂ ಹೇಳಿದರು.

ಶ್ರೀ ಹೆಚ್.ಡಿ. ಬಸವರಾಜು:– ಕೇಳಿ ಆಗಲಿಲ್ಲವೆಂದು...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಅದು ತಿದ್ದುಪಡಿಯಾಗಲಿಲ್ಲ.

ಶ್ರೀ ಹೆಚ್.ಡಿ. ಬಸವರಾಜು:– ತಾವು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೀರ. ಆಕ್ಷನ್ ತೆಗೆದುಕೊಂಡಿಲ್ಲವಲ್ಲ ಸಾರ್ ಇವತ್ತಿಗೂ ಕೂಡ ನಾವು ಆ ಅಕಾಡೆಮಿಕ್ ಕೌನ್ಸಿಲ್‌ಗೆ ಹೋಗಿ ಮೀಟಿಂಗ್‌ನಲ್ಲಿ ಕುಳಿತುಕೊಳ್ಳುತ್ತಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡಿದ 6 ಜನ ಖ್ಯಾತ ಶಿಕ್ಷಣತಜ್ಞರು. ಅವರಲ್ಲಿ ಅನುಸೂಚಿತ ಜಾತಿ, ಇತರೆ ಹಿಂದುಳಿದವರು, ಮಹಿಳೆಯರು, ಧಾರ್ಮಿಕ ಅಲ್ಪಸಂಖ್ಯಾತರು, ವಾಣಿಜ್ಯ, ಬ್ಯಾಂಕಿಂಗ್, ಕೈಗಾರಿಕೆ ಇತರೆ ವ್ಯಕ್ತಿಗಳ ಪೈಕಿ... ಎಂದು ಈ ರೀತಿ ಇದೆ. ಆದ್ದರಿಂದ, ಈ ನೇಮಕ ಮಾಡಿರುವವರು ಅಕಾಡೆಮಿಕ್ ಕೌನ್ಸಿಲ್ ಸ್ಟಾಂಡರ್ಡ್‌ಗೆ ಇರತಕ್ಕಂಥವರಲ್ಲವೆಂದು ಪತ್ರಿಕೆಗಳಲ್ಲಿ, ಪಬ್ಲಿಕ್‌ನಲ್ಲಿ ಚರ್ಚೆಯಾಗುತ್ತಿದೆ.

ಶ್ರೀ ಡಿ, ಮಂಜುನಾಥ್:– ಪತ್ರಿಕೆಗಳಲ್ಲಿ ಬರೆಯುವುದು ಬರೆದಿರಬಹುದು ಆದರೆ, ಇನ್ನೂ ಮಾಡಿಲ್ಲ. ಮಾಡಬೇಕಾದರೆ ಈಗ ಕಾನೂನು ಪ್ರಕಾರ ಮಾಡುತ್ತೇವೆ.

ಶ್ರೀ ನೆ.ಲ. ನರೇಂದ್ರ ಬಾಬು:– ಕೊಳಚೆ ನಿರ್ಮೂಲನಾ ಮಂಡಳಿಯಲ್ಲಿ ಕಟ್ಟಿರತಕ್ಕಂಥ ನಮ್ಮ ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ 210 ಮನೆಗಳು ಬೀಳುವ ಸ್ಥಿತಿಯಲ್ಲಿವೆ. ಬಿದ್ದು ದೊಡ್ಡ ಅನಾಹುತವಾದರೆ, ಇಡೀ ಜನಪ್ರತಿನಿಧಿಗಳೂ ಆ ಬಡಾವಣೆ ಇರಬಹುದು, ರಾಜ್ಯದಲ್ಲಿ ನಾವು ತಲೆತಗ್ಗಿಸುವಂಥ ಸ್ಥಿತಿ ಇದೆ. ಈಗಾಗಲೇ ಕೊಳಚೆ ನಿರ್ಮೂಲನಾ ಮಂಡಳಿಗೆ, ಸರ್ಕಾರಕ್ಕೆ ನಾನು ಪತ್ರವನ್ನು ಬರೆದಿದ್ದೇನೆ. ಅದರಲ್ಲಿ ನನಗೆ ಒದಗಿಸಿರತಕ್ಕಂಥ ಉತ್ತರದಲ್ಲಿ ಇವತ್ತು ಅಲ್ಲಿ 210 ಮನೆಗಳೇನಿವೆ, ಅವುಗಳೂ ಸ್ಥಳೀಯ ಸಂಸ್ಥೆಗೆ ವರ್ಗಾವಣೆ ಆಗಿವೆ. ಆದುದ್ದರಿಂದ, ನಮಗೂ, ಇದಕ್ಕೂ ಸಂಬಂಧವಿಲ್ಲವೆನ್ನುವ ರೀತಿಯಲ್ಲಿ ಉತ್ತರವಿದೆ. ನಾನು ಸಂಬಂಧಪಟ್ಟ ಕಮಿಷನರ್ ಹತ್ತಿರ ಹಲವಾರು ಬಾರಿ ಸುಮಾರು 10 ರಿಂದ 15 ಸಾರಿ ಚರ್ಚೆ ಮಾಡಿ, ಅವರೂ ಸ್ಪಾಟ್ ಇನ್ಸ್‌ಪೆಕ್ಟ್ ಮಾಡಿ ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಬಂದಂಥದ್ದರಲ್ಲಿ ಯಾವಾತ್ತಾದರೂ ಅಲ್ಲಿ ಬಿದ್ದು ಸಾವಿರಾರು ಜನ ಬೀದಿ ಪಾಲಾಗುತ್ತಾರೆ. ಜೊತೆಗೆ, ಪ್ರಾಣಕ್ಕೆ ಹಾನಿಯಾಗಿದೆ ಎಂದು ನಾನು ತಿಳಿಸಿದ್ದೆ. ಈ ಉತ್ತರದಲ್ಲಿ ಈ ಮನೆ ಕಟ್ಟಿದ್ದು 82–83ರಲ್ಲಿ, ಗುಂಡೂರಾವ್ ಕಾಲೋನಿ ಎಂದು ಹೇಳಿ ಅಗ್ರಹಾರ ದಾಸರಹಳ್ಳಿಯಲ್ಲಿ ಇಂಡಸ್ಟ್ರಿಯಲ್ ಟೌನ್ ವಾರ್ಡ್ ರಾಜಾಜಿನಗರ ವಿಧಾನ ಸಭಾಕ್ಷೇತ್ರದಲ್ಲಿ 82–83ರಲ್ಲಿ ಕಟ್ಟಿದ್ದಂಥ ಮನೆಯನ್ನು 1997ರಲ್ಲಿ ಬೆಂಗಳೂರು ಮಹಾನಗರಪಾಲಿಕೆಗೆ ವರ್ಗಾಯಿಸಲಾಯಿತೆಂದು